**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ/ವಾಣಿಜ್ಯ ನ್ಯಾಯಾಲಯ ,**
**ಉಡುಪಿ ಜಿಲ್ಲೆ, ಉಡುಪಿ**

Com.O.S.61/2023 ಪಿ.ಡಬ್ಲ್ಯೂ: 1

| | |
|---|---|
| ಸಾಕ್ಷಿದಾರರ ಹೆಸರು | ವಿಶ್ವನಾಥ ಶೆಟ್ಟಿ |
| ತಂದೆಯ ಹೆಸರು | ಬಾಬು ಶೆಟ್ಟಿ |
| ವಯಸ್ಸು | 40 ವರ್ಷ |
| ಉದ್ಯೋಗ | ಸಿವಿಲ್ ಕಾಂಟ್ರಾಕ್ಟರ್ |
| ವಿಳಾಸ | ಹಾವಂಜೆ , ಬ್ರಹ್ಮಾವರ ತಾಲೂಕು |

ದಿನಾಂಕ: 26-06-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಡಿ. ಎಸ್ ವಕೀಲರಿಂದ**

ನಾನು ಈದಿನ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ನಿಜ ಇರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ. ನಾನು ದಾವೆಯ ಜೊತೆಯಲ್ಲಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ.

1. ಪ್ರತಿವಾದಿಯೊಂದಿಗಿನ ಕಟ್ಟಡ ನಿರ್ಮಾಣದ ಕರಾರು ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ.1 ಎಂದು ಗುರುತಿಸಿತು.

2. ಪ್ರತಿವಾದಿ ಹಿರಿಯಡ್ಕ ಪೊಲೀಸರಿಗೆ ಕೊಟ್ಟ ದೂರು ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ.2 ಎಂದು ಗುರುತಿಸಿತು.

3. ಸದರಿ ದೂರಿಗೆ ಕೊಟ್ಟ ಪೊಲೀಸರ ಹಿಂಬರಹ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ.3 ಎಂದು ಗುರುತಿಸಿತು.

4. ನಿಶಾನೆ ಪಿ -1 ರ ಕಟ್ಟಡದ ನಕಾಶೆ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ.4 ಎಂದು ಗುರುತಿಸಿತು.

5. ವಾದಿಯ ಬ್ಯಾಂಕಿನ ಖಾತಾ ವಿವರ ಹಾಜರುಪಡಿಸಿದ್ದೇನೆ ಅದನ್ನು ನಿಶಾನೆ ಪಿ.5 ಎಂದು ಗುರುತಿಸಿತು.

ಕಾರಣ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕೆಂದು ಕೇಳುತ್ತೇನೆ.

ಪಾಟೀಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಗಿದೆ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ವಾಣಿಜ್ಯ ನ್ಯಾಯಾಧೀಶರು ,
ಉಡುಪಿ